**QCA: 264**

(ಅಭ್ಯರ್ಥಿಯೇ ಭರ್ತಿ ಮಾಡಬೇಕು / To be filled by the candidate)

ನೋಂದಣಿ ಸಂಖ್ಯೆ / Roll No :

ವಿಷಯ/Subject: **264-Compulsory Kannada**
**264-ಕಡ್ಡಾಯ ಕನ್ನಡ**

ಪುಸ್ತಿಕೆಯ ಕ್ರಮಸಂಖ್ಯೆ
Booklet Serial No.

ದಿನಾಂಕ /Date:

| 08 | 09 | 2017 |
|---|---|---|

(ಮೇಲಿನ ಕ್ರಮಸಂಖ್ಯೆಯನ್ನು ಪುಸ್ತಿಕೆಯ ಯಾವ ಭಾಗದಲ್ಲೂ ಬರೆಯಬಾರದು)
(Above Serial No. should not be written anywhere else in the booklet)

ಸಂವೀಕ್ಷಕರ ಸಹಿ ಮತ್ತು ದಿನಾಂಕ
Invigilator's signature with date

**ಅಭ್ಯರ್ಥಿಗಳಿಗೆ ಸೂಚನೆಗಳು**

ಈ ಪುಸ್ತಕವು 36 ಮುದ್ರಿತ ಪುಟಗಳನ್ನೊಳಗೊಂಡಿದೆ. ದಯವಿಟ್ಟು ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ಪರೀಕ್ಷಿಸತಕ್ಕದ್ದು. ದೋಷವಿದ್ದಲ್ಲಿ ಅದನ್ನು ಹಿಂದಿರುಗಿಸಿ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು. ಅಭ್ಯರ್ಥಿಗಳು ಪ್ರಶ್ನೆಗಳಿಗೆ ಉತ್ತರವನ್ನು ಬರೆಯುವ ಮೊದಲು ಈ ಪುಟದಲ್ಲಿರುವ ಸೂಚನೆಗಳನ್ನು ಕಡ್ಡಾಯವಾಗಿ ಓದಿ.

ಅಭ್ಯರ್ಥಿಯು ಪ್ರಶ್ನೆಗಳ ಉತ್ತರ ಪುಸ್ತಿಕೆಯಲ್ಲಿ ನಿಗದಿತ ಸ್ಥಳದಲ್ಲಿಯೇ ಉತ್ತರಗಳನ್ನು ಬರೆಯಿರಿ. ನಿಗದಿತ ಸ್ಥಳಕ್ಕಿಂತ ಹೊರಗೆ ಬರೆದ ಉತ್ತರಗಳಿಗೆ ಯಾವುದೇ ಅಂಕಗಳನ್ನು ನೀಡಲಾಗುವುದಿಲ್ಲ.

**Instructions for the Candidates**

This booklet contains 36 printed pages. Please check that this Booklet does not have any misprint or torn or missing pages or items, etc. If so, get it replaced by a fresh Booklet.

Candidates must read the instructions on this page and the following pages carefully before attempting the paper.

Candidates should attempt questions in the space prescribed under each question in the booklet. Any answer written outside the space allotted may not be given credit.

# Do Not write anything on this page

# ಈ ಪುಟದ ಮೇಲೆ ಏನನ್ನೂ ಬರೆಯಕೂಡದು

---

ಅಂಕಗಳ ಪಟ್ಟಿ / **Marks Statement (For Examiners Only)**

ಅಭ್ಯರ್ಥಿಯು ಈ ಕೆಳಗೆ ಯಾವುದೇ ಗುರುತು ಮಾಡಬಾರದು/ **Candidate should not make any marking on the sheet below.**

| ಪ್ರಶ್ನೆ ಸಂಖ್ಯೆ Q. No | ಅಂಕಗಳು Marks Awarded | ಪ್ರಶ್ನೆ ಸಂಖ್ಯೆ Q. No | ಅಂಕಗಳು Marks Awarded | ಪ್ರಶ್ನೆ ಸಂಖ್ಯೆ Q. No | ಅಂಕಗಳು Marks Awarded | ಒಟ್ಟು ಅಂಕಗಳು Total Marks |
|---|---|---|---|---|---|---|
| 1 | | 14 | | 27 | | |
| 2 | | 15 | | 28 | | |
| 3 | | 16 | | 29 | | |
| 4 | | 17 | | 30 | | |
| 5 | | 18 | | 31 | | |
| 6 | | 19 | | 32 | | |
| 7 | | 20 | | 33 | | |
| 8 | | 21 | | 34 | | |
| 9 | | 22 | | 35 | | |
| 10 | | 23 | | 36 | | |
| 11 | | 24 | | 37 | | |
| 12 | | 25 | | | | |
| 13 | | 26 | | | | |

ಮೌಲ್ಯಮಾಪಕರ ಸಹಿ, ಸಂಕೇತ ಮತ್ತು ದಿನಾಂಕ

Evaluator’s Signature, Code with date

# IMPORTANT INSTRUCTIONS

1. Read the instructions on the cover page and the instructions mentioned on the next page of this booklet carefully and strictly follow them.
2. Write your roll number and other particulars in the space provided on the cover of the booklet.
3. You have to write on the both sides of every answerable sheet of booklet. If mistakenly you have not used some answerable pages while writing answers, write 'Please Turn Over' on those pages.
4. For rough notes calculations, rough pages given at the end of this booklet must be used. The rough notes should be crossed through afterwards.
5. If you wish to cancel any answer, draw your pen through it and below it you must write that "This answer has been cut by me and should not be evaluated."
6. Do not write your Name, Roll No., signature or anything else on the booklet except as required in the cover page.
7. Do not keep such a material with you which may cause doubt of using unfair means and do not take out any material given inside the exam hall until the exam is over. Do not leave your seat without permission.

# ಮುಖ್ಯ ಸೂಚನೆಗಳು

1. ರಕ್ಷಾ ಪುಟದಲ್ಲಿನ ಸೂಚನೆಗಳನ್ನು ಓದತಕ್ಕದ್ದು ಮತ್ತು ಈ ಬುಕ್‌ಲೆಟ್‌ನ ಮುಂದಿನ ಪುಟದಲ್ಲಿ ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದತಕ್ಕದ್ದು ಮತ್ತು ಅವುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
2. ಪುಸ್ತಿಕೆಯ ರಕ್ಷಾಪುಟದಲ್ಲಿ ಒದಗಿಸಲಾಗಿರುವ ಸ್ಥಳದಲ್ಲಿ ನಿಮ್ಮ ನೋಂದಣಿ ಸಂಖ್ಯೆ ಮತ್ತಿತರ ವಿವರಗಳನ್ನು ಬರೆಯತಕ್ಕದ್ದು.
3. ಪುಸ್ತಿಕೆಯಲ್ಲಿ ಉತ್ತರಿಸುವಾಗ ಪ್ರತಿಯೊಂದು ಪುಟದ ಎರಡೂ ಬದಿಗಳಲ್ಲೂ ಬರೆಯಬೇಕು. ಉತ್ತರಿಸುವಾಗ ಉತ್ತರಿಸತಕ್ಕ ಹಾಳೆಗಳು ತಪ್ಪಿನಿಂದ ಬರೆಯದೆ ಬಿಟ್ಟು ಹೋಗಿದ್ದಲ್ಲಿ ಆ ಪುಟಗಳ ಮೇಲೆ 'ದಯವಿಟ್ಟು ಪುಟವನ್ನು ತಿರುಗಿಸಿ' ಎಂದು ಬರೆಯತಕ್ಕದ್ದು.
4. ಲೆಕ್ಕಾಚಾರದ ಒರಟು ಟಿಪ್ಪಣಿಗಳಿಗೆ, ಪುಸ್ತಿಕೆಯ ಕೊನೆಯಲ್ಲಿ ಇದಕ್ಕೆಂದೇ ನೀಡಿರುವ ಪುಟಗಳನ್ನು ಉಪಯೋಗಿಸತಕ್ಕದ್ದು. ತದನಂತರ ಈ ಪುಟದಲ್ಲಿನ ಒರಟು ಟಿಪ್ಪಣಿಗಳ ಮೇಲೆ (×) ಗೆರೆ ಎಳೆಯಬೇಕು.
5. ನಿಮ್ಮ ಯಾವುದೇ ಉತ್ತರವನ್ನು ರದ್ದು ಪಡಿಸಬೇಕೆಂದು ಇಚ್ಛಿಸಿದಲ್ಲಿ, ಆ ಪುಟದ ಮೇಲೆ ನಿಮ್ಮ ಲೇಖನಿಯಿಂದ ಗೆರೆ ಎಳೆದು ಅದರ ಕೆಳಗೆ 'ಈ ಉತ್ತರವು ನನ್ನಿಂದ ಹೊಡೆದು ಹಾಕಲ್ಪಟ್ಟಿದೆ ಮತ್ತು ಇದನ್ನು ಮೌಲ್ಯಮಾಪನ ಮಾಡತಕ್ಕದ್ದಲ್ಲ' ಎಂದು ಬರೆಯತಕ್ಕದ್ದು.
6. ರಕ್ಷಾ ಕವಚದ ಅಪೇಕ್ಷಿತ ಸ್ಥಳದಲ್ಲಿ ಹೊರತಾಗಿ ನಿಮ್ಮ ಹೆಸರು, ನೋಂದಣಿ ಸಂಖ್ಯೆ, ಸಹಿ ಅಥವಾ ಬೇರೇನನ್ನೂ ಪುಸ್ತಿಕೆಯ ಮೇಲೆ ಬರೆಯಬಾರದು.
7. ಅನುಚಿತ ಉಪಕರಣಗಳ ಉಪಯೋಗದ ಪ್ರಯತ್ನದ ಸಂದೇಹಕ್ಕಾಸ್ಪದವಾದ ವಸ್ತುವನ್ನು ನಿಮ್ಮ ಬಳಿ ಇಟ್ಟುಕೊಳ್ಳಬೇಡಿ ಮತ್ತು ಅನುಮತಿಯಿಲ್ಲದೆ ನಿಮ್ಮ ಆಸನದಿಂದ ಏಳಬೇಡಿ.

**2017**

**264-Compulsory Kannada**

**ಕಡ್ಡಾಯ ಕನ್ನಡ**

**Time: 3 Hours** **Maximum Marks : 150**

**ಸಮಯ : 3 ಗಂಟೆಗಳು** **ಗರಿಷ್ಠ ಅಂಕಗಳು : 150**

## ಸೂಚನೆಗಳು

## INSTRUCTIONS

1. ಅಭ್ಯರ್ಥಿಗಳು ಎಲ್ಲಾ ಭಾಗಗಳನ್ನು ಮತ್ತು ಪ್ರಶ್ನೆಗಳನ್ನು ಉತ್ತರಿಸಬೇಕು.
2. ಪ್ರತಿ ಪ್ರಶ್ನೆಗೆ ನಮೂದಿಸಲಾದ ಅಂಕಗಳನ್ನು ಪ್ರಶ್ನೆಯ ಕೊನೆಯಲ್ಲಿ ನೀಡಲಾಗಿದೆ.
3. ನಿರ್ದಿಷ್ಟವಾಗಿ ಸೂಚಿಸಿದ ಹೊರತು, ಉತ್ತರಗಳನ್ನು ಕನ್ನಡದಲ್ಲಿ ಬರೆಯತಕ್ಕದ್ದು.
4. ಪತ್ರವನ್ನು ಬರೆಯುವ ಪ್ರಶ್ನೆಗಳನ್ನು ಉತ್ತರಿಸುವಾಗ ನಿಮ್ಮ ಸಹಿಯನ್ನು ಹಾಕುವುದನ್ನಾಗಲೀ ಅಥವಾ ನಿಮ್ಮ ಹೆಸರು / ವ್ಯಕ್ತಿತ್ವವನ್ನು ನಮೂದಿಸುವುದನ್ನಾಗಲೀ ಮಾಡಕೂಡದು.

**ಪ್ರಶ್ನೆಗಳಿಗೆ ಉತ್ತರಿಸುವ ಮುನ್ನ ಮುಖಪುಟದಲ್ಲಿ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು.**

**Candidate should read the Instructions given in the Facing Sheet, before answering the questions.**

**1.** **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು 300 ಶಬ್ದಗಳಲ್ಲಿ ಪ್ರಬಂಧ ಬರೆಯಿರಿ.** **(25 ಅಂಕಗಳು)**

(ಅ) ನಗರಗಳಲ್ಲಿನ ವಾಹನದಟ್ಟಣೆ ಸಮಸ್ಯೆಯನ್ನು ಬಗೆಹರಿಸುವ ಬಗೆ.

(ಆ) ಶಿಕ್ಷಣದಲ್ಲಿ ಮಾನವೀಯ ಮೌಲ್ಯಗಳ ಅಳವಡಿಕೆಯ ಅಗತ್ಯತೆ.

(ಇ) ನಮ್ಮ ಹಳ್ಳಿಗಳು – ಅಂದು ; ಇಂದು

(ಈ) ನಿಮ್ಮ ಮೆಚ್ಚಿನ ಆಟ

**ಈ ಕೆಳಗಿನ ಗದ್ಯಭಾಗವನ್ನು ಗಮನವಿಟ್ಟು ಓದಿ ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಸೂಕ್ತ ಉತ್ತರ ಬರೆಯಿರಿ.**

ಪ್ರತಿಯೊಬ್ಬ ವ್ಯಕಿಯೂ ಆಯಾ ಸಮುದಾಯದ ಸಂಪ್ರದಾಯದಿಂದ ರೂಪಿತನಾದವನು. ನಡೆ, ನುಡಿ ಆದರ್ಶಗಳು, ನೈತಿಕ ಮೌಲ್ಯಗಳು ಇವನ್ನೆಲ್ಲಾ ಸಂಪ್ರದಾಯವು ಒದಗಿಸಿ ವ್ಯಕ್ತಿಯನ್ನು ರೂಪಿಸುತ್ತದೆ. ಹೊರಗೆ ಕಂಡುಬರುವ ಈ ಪರಿಕರಗಳನ್ನು ಒದಗಿಸುವ ಸಂಪ್ರದಾಯವೇ ಅವನ ಮನೋಭಾವವನ್ನೂ ರೂಪಿಸುತ್ತದೆ. ವ್ಯಕ್ತಿಯ ಪ್ರಪಂಚವನ್ನು ನೋಡುವುದು ಅವನ ಸಂಪ್ರದಾಯ ನೀಡಿರುವ ಮಸೂರದ ಮೂಲಕ.

ಸಂಪ್ರದಾಯದ ಈ ಮಹತ್ತರ ಪ್ರಭಾವ ನಮ್ಮ ಗಮನಕ್ಕೆ ಬರುವುದಿಲ್ಲ. ಅದರ ಒತ್ತಡ ನಮ್ಮ ಮೇಲೆ ಇರುವ ವಾಯುವಿನ ಒತ್ತಡದಂತೆ. ನಮ್ಮ ಮಟ್ಟಿಗೆ ಅದು ಸ್ವಾಭಾವಿಕ, ಹಾಗೆಯೇ ಇರತಕ್ಕದ್ದು. ಇದರಿಂದಾಗಿ ಬೇರೆ ಸಮುದಾಯಗಳ ಜನರ ನಡವಳಿಕೆಗಳು, ರೀತಿನೀತಿಗಳು, ಮನೋಭಾವಗಳು ನಮಗೆ ವಿಚಿತ್ರವಾಗಿ ತೋರಿಬರುತ್ತವೆ. ತಿರಸ್ಕಾರಕ್ಕೆ ಗುರಿಯಾಗುತ್ತೇವೆ.

ನಮ್ಮದು ಸರಿ, ಇತರರದು ತಪ್ಪು ಎಂಬ ಮನೋಭಾವ ಎಲ್ಲೆಲ್ಲೂ ಕಂಡು ಬರುವಂತಹದು. ಇದರ ತೀವ್ರತೆ ವಿಭಿನ್ನ ಮತಧರ್ಮಗಳಿಗೆ ಸೇರಿದ ಗುಂಪುಗಳ ಜನರ ನಡುವಿನ ವ್ಯತ್ಯಾಸಗಳಲ್ಲಿ ಎದ್ದು ಕಾಣುತ್ತದೆ. ತಾನು ಅನುಸರಿಸುವುದೇ ಧರ್ಮ, ತಾನು ನಂಬುವ ದೇವರು ನಿಜವಾದ ದೇವರು. ತನ್ನ ಧರ್ಮದ ಅನುಯಾಯಿಗಳು ಹೋಗುವ ಜಾಗ ಸ್ವರ್ಗ ಹೀಗೆ ಭಾವಿಸಿ, ಇತರರದ್ದು ಮೂಢನಂಬಿಕೆ ಅವರು ಪೂಜಿಸುವ ದೇವತೆಗಳು ಕ್ಷುದ್ರ, ಅವರೆಲ್ಲಾ ನರಕಕ್ಕೆ ಹೋಗುತ್ತಾರೆ ಎಂದು ನಂಬಿರುವ ಮತಧರ್ಮ ಗುಂಪುಗಳು ಅಪರೂಪವೇನಲ್ಲ.

ಈ ತನ್ನದು, ಪರಕೀಯ ಎಂಬ ಭಾವನೆ ಬಹಳ ಪ್ರಾಚೀನವಾದುದು. ಬೇರೆ ಬೇರೆ ನೆಲೆಗಟ್ಟುಗಳ ಮೇಲೆ ಈ ಭಾವನೆ ತಲೆ ಎತ್ತುತ್ತದೆ. ರಾಜಕೀಯ, ಸಾಮಾಜಿಕ, ಆರ್ಥಿಕ, ಮತ ಧಾರ್ಮಿಕ, ವರ್ಗ ಕಲಹಗಳ ಅಡಿಪಾಯ ಇದು.

ಈ ಮನೋಭಾವ ಇತರರ ಜೀವನಕ್ರಮಗಳು, ಧಾರ್ಮಿಕ ಭಾವನೆಗಳು ಮುಂತಾದವುಗಳತ್ತ ವಾಸ್ತವಿಕ ದೃಷ್ಟಿ ಬೀರಲು ಅಡ್ಡಿಯಾಗುತ್ತದೆ. ಅವೂ ಸಹ ನಮ್ಮದರಂತೆಯೇ ಜೀವನದ ಸಮಸ್ಯೆಗಳ ಪರಿಹಾರಕ್ಕಾಗಿ ರೂಪುಗೊಂಡಿರುವ ಪರ್ಯಾಯ ಕ್ರಮಗಳು ಎಂಬುದು ಮರೆಯಾಗುತ್ತದೆ.

ಇಂದಿನ ಜಗತ್ತಿನಲ್ಲಿ ವಿವಿಧ ಸಂಸ್ಕೃತಿಗಳಲ್ಲಿ ಬೆಳೆದು ಬಂದವರು ಒಂದು ಕಡೆ ಬಾಳುವುದು ಹೆಚ್ಚಾಗುತ್ತಿದೆಯಾದರೂ, ಸಹಿಷ್ಣುತೆ ಹೆಚ್ಚಾಗುತ್ತಿಲ್ಲ. ಪ್ರಭಾವಶಾಲಿ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಸಾರವಾದಂತೆ ಇತರ ಸಂಸ್ಕೃತಿಗಳು ಮಬ್ಬಾಗುತ್ತವೆ.

ಸಮಾಜ, ಸಂಸ್ಕೃತಿ, ವ್ಯಕ್ತಿಗಳ ಪರಸ್ಪರ ಪ್ರಭಾವವನ್ನೂ ಅರಿತುಕೊಳ್ಳಬೇಕಾದರೆ, ಈ ಪೂರ್ವಾಗ್ರಹದಿಂದ ಮುಕ್ತರಾಗಬೇಕು. ಜಟಿಲವಾದ, ವಿಶಾಲವಾದ ಒಂದು ನೋಟದ ಹಿಡಿತಕ್ಕೆ ತಂದುಕೊಳ್ಳಲಾಗದ ಆಧುನಿಕ ಸಮಾಜಗಳು ಅಧ್ಯಯನ ಮಾಡಿ ಈ ಪ್ರಕ್ರಿಯೆಯನ್ನು ಅರಿತುಕೊಳ್ಳಬಹುದು. ವಾಸ್ತವಾಂಶಗಳನ್ನು ಅರಿತುಕೊಳ್ಳಲು ಈ ಬಗೆಯ ಅಧ್ಯಯನಗಳನ್ನು ಬಿಟ್ಟರೆ ಬೇರೆ ಯಾವ ಸೂಕ್ತ ಮಾರ್ಗವೂ ಇಲ್ಲ.

ಹಲವು ಸಂಸ್ಕೃತಿಗಳತ್ತ ಗಮನ ಹರಿಸಿ ನೋಡಿದರೆ ಅವುಗಳ ನಡುವೆ ಇರುವ ವ್ಯತ್ಯಾಸಗಳು ಎದ್ದು ಕಾಣುತ್ತವೆ. ಒಂದು ಸಂಸ್ಕೃತಿಯ ಆಶ್ರಯದಲ್ಲಿ ಬೆಳೆದು ಇನ್ನೊಂದರ ಆಶ್ರಯದಲ್ಲಿ ಬಾಳಬೇಕಾಗಿ ಬಂದಾಗ ಈ ವ್ಯತ್ಯಾಸಗಳ ಪರಿಣಾಮ ಬಾಳಿಗೆ ಒಂದು ಬಗೆಯ ದುಗುಡವನ್ನು ತುಂಬುತ್ತದೆ. ಎರಡು ಸಂಸ್ಕೃತಿಗಳ ನಡುವೆ ಯಾವುದು ಉತ್ತಮ ಎಂಬುದು ಸಮಸ್ಯೆಯಲ್ಲ. ಯಾವುದು ನಮ್ಮದು ಎಂಬುದು ನಾವು ಬೆಳೆದು ಬಂದ ಸಂಸ್ಕೃತಿ ಸದಾ ಅಪ್ಯಾಯಮಾನ.

ಸಮುದಾಯ ಜೀವನದಲ್ಲಿ ಏಳುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಂಸ್ಕೃತಿ ರೂಪಿತವಾಗಿದೆ. ಜಗತ್ತಿನ ಎಲ್ಲಾ ಜನರಿಗೂ, ಎಲ್ಲ ಸಮುದಾಯಗಳಿಗೂ ಬಾಳಿನ ಮೂಲ ಸಮಸ್ಯೆಗಳ ಮಟ್ಟಿಗೆ ಹೆಚ್ಚು ವ್ಯತ್ಯಾಸಗಳಿಲ್ಲ. ಆದರೆ ಅವುಗಳ ನಿವಾರಣೆಗಾಗಿ ರೂಪಿಸಿರುವ ಮಾರ್ಗಗಳಲ್ಲಿ ಮಾತ್ರ ಏಕೆ ವ್ಯತ್ಯಾಸ? ಭೌಗೋಳಿಕ ಆವರಣ, ಐತಿಹಾಸಿಕ ಕಾರಣಗಳು ಹೀಗೆ ಹಲವು ಕಾರಣಗಳನ್ನು ಸಮಾಜ ವಿಜ್ಞಾನಿಗಳು ಬೊಟ್ಟು ಮಾಡಿ ತೋರುತ್ತಾರೆ. ಈ ಅಂಶಗಳ ಪ್ರಭಾವವನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಆದರೆ ಅವು ಸಮಸ್ಯೆಯ ಮೂಲವನ್ನು ತೋರುವುದಿಲ್ಲ.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **(5 x 5 = 25 ಅಂಕಗಳು)**

| |
|---|
| **2.** ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಸಂಪ್ರದಾಯ ವಹಿಸುವ ಪಾತ್ರವೇನು ? |

**3.** ತನ್ನ ಸಂಸ್ಕೃತಿಯೇ ಶ್ರೇಷ್ಠ ಎಂಬ ಭಾವನೆಯ ಕಾರಣ ಮತ್ತು ಪರಿಣಾಮಗಳೇನು ?

**4.** ಇಂದಿನ ಜಗತ್ತಿನಲ್ಲಿ ಅಸಹಿಷ್ಣುತೆ ಹೆಚ್ಚಾಗಲು ಕಾರಣಗಳೇನು ?

5. ಅನ್ಯ ಸಂಸ್ಕೃತಿಯ ಜನರ ರೀತಿ ನೀತಿಗಳನ್ನು ತಿಳಿಯುವ ಸರಿಯಾದ ಮಾರ್ಗ ಯಾವುದೆಂದು ಲೇಖಕರು ಸೂಚಿಸಿದ್ದಾರೆ ?

**6.** ಸಂಸ್ಕೃತಿಗಳ ನಡುವಿನ ವ್ಯತ್ಯಾಸವನ್ನು ಕುರಿತು ಈ ಲೇಖನದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯವೇನು ?

**7. ಸುಮಾರು ನೂರು ಪದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ. (25 ಅಂಕಗಳು)**

ವಿ.ಸೂ: ಲೇಖನ ಸಂಗ್ರಹವು ಸೂಚಿಸಿರುವುದಕ್ಕಿಂತ ಹೆಚ್ಚು ಅಥವಾ ಕಡಿಮೆ ಇದ್ದರೆ ಅಂಕಗಳನ್ನು ಕಳೆಯಲಾಗುವುದು.

ನಮ್ಮ ನಡುವಿನ ಪರಿಸರವನ್ನು ಜೀವಿ ಮತ್ತು ನಿರ್ಜೀವಗಳ ಸಂಗಮ ಎಂದು ಹೇಳಬಹುದು. ಇಲ್ಲಿ ಜೀವಿ ಮತ್ತು ನಿರ್ಜೀವಿಗಳು ಹವಾಮಾನ, ವಾತಾವರಣ, ನೈಸರ್ಗಿಕ ಶಕ್ತಿಗಳು ಮತ್ತು ಪ್ರಕ್ರಿಯೆಗಳ ನಡುವೆ ಸಂಬಂಧ, ಸಮನ್ವಯತೆ ಸಹಕಾರವನ್ನು ಹೊಂದಿರುವ ಒಟ್ಟು ಸಮೂಹವೇ ಪರಿಸರ. ಪರಿಸರ ಜೀವಿಗಳ ಅವಾಸಸ್ಥಾನ. ಪ್ರಪಂಚದಲ್ಲಿ ಸುಮಾರು ಹತ್ತು ಕೋಟಿಗೂ ಅಧಿಕ ಜನ ಕಾಡಿನಲ್ಲೇ ವಾಸವಾಗಿದ್ದು, 160 ಕೋಟಿಗೂ ಅಧಿಕ ಜನ ತಮ್ಮ ಜೀವನಾವಶ್ಯಕತೆಗೆ ಕಾಡನ್ನೇ ನಂಬಿಕೊಂಡಿದ್ದಾರೆ. ಅರಣ್ಯಗಳು ಶೇಕಡಾ 80 ರಷ್ಟು ಭೂಮಿಯ ಜೀವ ವೈವಿಧ್ಯಕ್ಕೆ ನೆಲೆಯಾಗಿವೆ. ಭೂಮಿಯಲ್ಲಿ ಇಂದು ಸಂಪೂರ್ಣ ಸ್ವಾಭಾವಿಕ ಪರಿಸರ ಇಲ್ಲವೆಂಬಷ್ಟರ ಮಟ್ಟಿಗೆ ಮಾನವ ತನ್ನ ಅನುಕೂಲಕ್ಕೆ ತಕ್ಕಂತೆ ಎಲ್ಲ ಪ್ರದೇಶದಲ್ಲಿ ಚಟುವಟಿಕೆಯನ್ನು ಹೊಂದಿರುವುದನ್ನು ಕಾಣಬಹುದು. ಮರುಭೂಮಿಯಿಂದ ಹಿಡಿದು ಮಳೆ ಕಾಡುಗಳವರೆಗೆ, ಸಾಗರದಿಂದ ಹಿಡಿದು ಹಿಮ ಪ್ರದೇಶದವರೆಗೆ ಮನುಷ್ಯ ಪರಿಸರವನ್ನು ತನ್ನ ವಾಸಸ್ಥಳವನ್ನಾಗಿ ಮಾರ್ಪಾಡು ಮಾಡಿಕೊಂಡಿರುವುದು ಮಾತ್ರವಲ್ಲದೆ ತನ್ನ ಅನುಕೂಲಕ್ಕೆ ಮತ್ತು ಲಾಭಕ್ಕೆ ತಕ್ಕಂತೆ ಸ್ವೇಚ್ಛೆಯಾಗಿ ಬದಲಾವಣೆ ಕೂಡ ಮಾಡಿದ್ದಾನೆ. ಕೃಷಿಭೂಮಿ, ಬೃಹತ್ ಅಣೆಕಟ್ಟುಗಳು, ನಗರಗಳು, ಕಾಲುವೆಗಳು, ಕೈಗಾರಿಕೆಗಳು, ರಸ್ತೆ, ರೈಲು, ಹಡಗು, ಜಲಾಂತರ್ಗಾಮಿ, ವಿಮಾನಗಳು ಬಾಹ್ಯಾಕಾಶ ಹೀಗೆ ಭೂಮಿಯ ಮೇಲೆ, ನೀರಿನ ಮೇಲೆ ವಾತಾವರಣದಲ್ಲಿ ಸಾಗರದ ತಳದಲ್ಲಿ ಮನುಷ್ಯನ ಚಟುವಟಿಕೆ ಇಲ್ಲದ ಪ್ರದೇಶವೇ ಇಲ್ಲ, ಇದ್ದರೆ ಅದು ಭೂಗರ್ಭದ ಒಳಗೆ ಮತ್ತು ಸಂಪೂರ್ಣ ಅಂತರಿಕ್ಷದ ಉದ್ದಗಲ ಮಾತ್ರ. ಭವಿಷ್ಯದಲ್ಲಿ ಅದನ್ನೂ ತಲುಪುವ ಹುಮ್ಮಸ್ಸು ಗರಿಗೆದರಿರುವುದನ್ನು ನೋಡಬಹುದಾಗಿದೆ.

ಸ್ಕಾಟ್‌ಲ್ಯಾಂಡಿನ ಪ್ರಸಿದ್ಧ ಇತಿಹಾಸಕಾರ, ತತ್ವಜ್ಞಾನಿ ಶಿಕ್ಷಕ, ವಿಡಂಬನ ಸಾಹಿತ್ಯ ಕೃತಿಕಾರ ಥಾಮಸ್ ಕಾರ್ಲೈಲ್, ಜೋಹನ್ ಊಲ್ಫ್ ಗ್ಯಾಂಗ್ ವಾನ್ ಗೊಯೆತೆ (ಜರ್ಮನಿಯ ರಾಜಕಾರಣಿ ಮತ್ತು ಲೇಖಕ) ತನ್ನ ಲೇಖನದಲ್ಲಿ ಬಳಸಿದ “ಉಮ್ಗೆಬಂಗ್” ಪದವನ್ನು ಅನುವಾದ ಮಾಡುತ್ತಾ “ಎನ್ವೈರನ್ಮೆಂಟ್”(ಪರಿಸರ) ಎಂಬ ಪದವನ್ನು ಮೊದಲ ಬಾರಿಗೆ ಬಳಸಿದನು.

ಮಾನವ ವಿಕಾಸದಲ್ಲಿ ಕೆಲವು ಪ್ರಮುಖ ಕಾಳಘಟ್ಟವನ್ನು ಇತಿಹಾಸಕಾರರು ಗುರುತಿಸುತ್ತಾರೆ. ಪುರಾತನ ಶಿಲಾಯುಗದಲ್ಲಿ ಅಲೆಮಾರಿಯಾಗಿದ್ದ ಮಾನವ ಚಿಕ್ಕ ಚಿಕ್ಕ ಗುಂಪುಗಳಲ್ಲಿ ವಾಸಮಾಡುವುದು. ಕಲ್ಲಿನ ಆಯುಧ, ಬೆಂಕಿಯ ಹುಡುಕಾಟ, ಚಕ್ರದ ತಯಾರಿ, ಕೃಷಿಯ ಮತ್ತು ಲೋಹಗಳ ಸಂಶೋಧನೆ ಇವು ಮೊದಲ ಹಂತದ ವಿಕಾಸವೆನ್ನಬಹುದು. ಕೃಷಿಯನ್ನು ಕಂಡುಹಿಡಿದು, ಮರದ ನೇಗಿಲು, ನಂತರ ಕಬ್ಬಿಣದ ನೇಗಿಲು ಕಂಡುಹಿಡಿಯುವವರೆಗೂ ಮನುಷ್ಯ ಸ್ವಾಭಾವಿಕ ಪರಿಸರದಲ್ಲೇ ಪರಿಸರದೊಂದಿಗೆ ಹೊಂದಿಕೊಂಡು ಅತ್ಯಲ್ಪ ಮಾರ್ಪಾಟುಗಳೊಂದಿಗೆ ಬದುಕುತ್ತಿದ್ದ. ಯಾವಾಗ ಜನಸಂಖ್ಯೆ ಹೆಚ್ಚಾಗಿ ಆಹಾರಕ್ಕೆ ಹೆಚ್ಚಿನ ಬೇಡಿಕೆ ಬಂದಿತೋ, ಅದೇ ಸಮಯಕ್ಕೆ ಕಬ್ಬಿಣದ ಆವಿಷ್ಕಾರವಾಗಿ ನೇಗಿಲು ಗಟ್ಟಿಯಾಯಿತು. ಆಗ ಸಣ್ಣ ಪ್ರಮಾಣದ ಅರಣ್ಯನಾಶ, ಮಣ್ಣಿನ ಬದಲಾವಣೆ ಪ್ರಕ್ರಿಯೆ ಶುರುವಾಯಿತು. ಗೊಬ್ಬರದ ಬಳಕೆ, ಆಧುನಿಕ ರಾಸಾಯನಿಕಯುಕ್ತ ಕೃಷಿಯ ಪರಿಚಯವಿಲ್ಲದ ಕಾರಣ ಕೃಷಿಭೂಮಿ ಈಗಿರುವಂತೆ ಒಂದೇ ಕಡೆ ಇರುವ ಬದಲು ಮಣ್ಣಿನ ಫಲವತ್ತತೆ ಕಡಿಮೆಯಾದಂತೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗವಾಗುತ್ತಿತ್ತು. ಆದರೂ ಇನ್ನೊಂದು ಚಕ್ರದ ಮಾದರಿ ಕೆಲವೇ ಪ್ರದೇಶದಲ್ಲಿ ನಡೆಯುತ್ತಿತ್ತು. ಜನಸಂಖ್ಯೆ ಬೆಳೆಯುತ್ತಾ ಸಮಾಜಗಳು ವಿಕಾಸವಾಗುತ್ತಾ, ತಂತ್ರಜ್ಞಾನಗಳು ಉನ್ನತೀಕರಣಗೊಳ್ಳುತ್ತಾ ಭೂಮಿಯ ಮಾರ್ಪಾಟು ಮತ್ತಷ್ಟು ಹೆಚ್ಚಾಯಿತು. ಇವೆಲ್ಲವೂ ಸಮುದಾಯದ ಆಹಾರದ ಒಂದು ಸೀಮಿತ ಉದ್ದೇಶಕ್ಕೆ ಕಡಿಮೆ ಪ್ರಮಾಣದಲ್ಲಿ ಪರಿಸರಕ್ಕೆ ಹೆಚ್ಚಿನ ಧಕ್ಕೆ ಉಂಟು ಮಾಡದಂತೆ ಇದ್ದವು.

**ಸಂಕ್ಷಿಪ್ತ ಲೇಖನ/Précis Writing**

**ಶೀರ್ಷಿಕೆ/Heading**

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| **No. of words Used:**<br>**ಉಪಯೋಗಿಸಿದ ಪದಗಳ ಸಂಖ್ಯೆ:** | | | | |

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| **No. of words Used:**<br>**ಉಪಯೋಗಿಸಿದ ಪದಗಳ ಸಂಖ್ಯೆ:** | | | | |

**8.** ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ. (25 ಅಂಕಗಳು)

The art of listening cannot be easily cultivated. It is the considered view of experienced people that it is infinitely more difficult and tiresome to master this art than the art of talking. He who aspires to be a proficient listener should first of all possess the ability and will to curb and control the innate human urge to blow his own trumpet. That is to say, in his enthusiasm he must never forget the role adopted by him and allow himself to be victimised by his inherent craving for giving vent to his own thoughts and ideas. The moment he unwittingly commits this blunder, he ceases to be an ideal listener. Throughout the conversation he should remain the very embodiment of passive acceptance and speechless assent.



https://www.freshersnow.com/previous-year-question-papers/

https://www.freshersnow.com/previous-year-question-papers/

https://www.freshersnow.com/previous-year-question-papers/

**9.** **ಕೆಳಗಿನವುಗಳಲ್ಲಿ ಒಂದನ್ನು ಕುರಿತು 100 ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.** **(1 x 10 = 10 ಅಂಕಗಳು)**

(ಅ) ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಸರ್ಕಾರ ಅನುಸರಿಸಬೇಕಾದ ಕ್ರಮಗಳ ಬಗ್ಗೆ.

(ಆ) ನಿಮ್ಮ ರಸ್ತೆಗೆ ಸಂಚಾರಿ ದೀಪ ಅಳವಡಿಸಲು ಕೋರಿ.

(ಇ) ಪ್ರವಾಸಿ ತಾಣಗಳಲ್ಲಿ ನೈರ್ಮಲ್ಯ ಕಾಯ್ದುಕೊಳ್ಳುವ ಅಗತ್ಯತೆ ಕುರಿತು.

(ಈ) ಖಾಸಗಿ ಶಾಲೆಗಳ ವ್ಯಾಪಾರಿ ದೃಷ್ಟಿಕೋನಕ್ಕೆ ಕಡಿವಾಣ ಹಾಕುವ ಬಗೆ.



https://www.freshersnow.com/previous-year-question-papers/

https://www.freshersnow.com/previous-year-question-papers/

**ಕೆಳಗಿನ ಗಾದೆಗಳಲ್ಲಿ ಎರಡರ ಅರ್ಥ ಸ್ವಾರಸ್ಯವನ್ನು ವಿವರಿಸಿ.** **(2 x 5=10 ಅಂಕಗಳು)**

**10.** ಬಿತ್ತಿದ್ದನ್ನು ಬೆಳಕೋ, ಮಾಡಿದ್ದನ್ನುಣ್ಣು

**ಅಥವಾ**

**10.** ಬಡವನ ಕೋಪ ದವಡೆಗೆ ಮೂಲ



https://www.freshersnow.com/previous-year-question-papers/

**11.** ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು

**ಅಥವಾ**

**11.** ಆಪತ್ತಿಗಾದವನೇ ನೆಂಟ



https://www.freshersnow.com/previous-year-question-papers/

**ಈ ಕೆಳಗಿನ ನುಡಿಗಟ್ಟುಗಳಲ್ಲಿ ಎರಡರ ಅರ್ಥ ವಿವರಿಸಿ. ಅವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ.**

**(2 x 3 = 6 ಅಂಕಗಳು)**

| |
|---|
| **12.** ಮೂಗು ತೂರಿಸು |

**ಅಥವಾ**

| |
|---|
| **12.** ಕಾಲಿಗೆ ಬುದ್ಧಿ ಹೇಳು |



https://www.freshersnow.com/previous-year-question-papers/

**13.** ಅಮಾವಾಸ್ಯೆಗೊಮ್ಮೆ, ಹುಣ್ಣಿಮೆಗೊಮ್ಮೆ

**ಅಥವಾ**

**13.** ಎಳ್ಳು ನೀರು ಬಿಡು

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (4 x 1= 4 ಅಂಕಗಳು)

| | |
|---|---|
| **14.** | "ಕರ್ಣಾಟ ಭಾರತ ಕಥಾಮಂಜರಿ" ಈ ಕಾವ್ಯವನ್ನು ಬರೆದವರು ಯಾರು ? <br><br> **ಅಥವಾ** |
| **14.** | "ಇಂಗ್ಲೀಷ್ ಗೀತೆಗಳು" ಕವನ ಸಂಕಲನವನ್ನು ಬರೆದ ಕವಿ ಯಾರು ? |
| **15.** | ಅಕ್ಕಮಹಾದೇವಿಯ ಅಂಕಿತನಾಮ ಯಾವುದು ? |
| **16.** | ಮಾಸ್ತಿಯವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ ? |

**17.** 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಯಾರ ಆತ್ಮಕತೆ ?

**ಈ ಕೆಳಗಿನವುಗಳಲ್ಲಿ ಐದಕ್ಕೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.** **(5 x 1=5 ಅಂಕಗಳು)**

**18.** ಶಿರಾ

**ಅಥವಾ**

**18.** ರಾಶಿ

| | |
|---|---|
| **19.** ಹರ್ಷ<br><br>**ಅಥವಾ**<br><br>**19.** ಸಂಧ್ಯಾ | |
| **20.** ನೇತ್ರ<br><br>**ಅಥವಾ**<br><br>**20.** ಕಾವ್ಯ | |
| **21.** ಮೃಗ<br><br>**ಅಥವಾ**<br><br>**21.** ನಿಯಮ | |
| **22.** ಸ್ಥಾನ<br><br>**ಅಥವಾ**<br><br>**22.** ಧ್ವನಿ | |

**ಈ ಕೆಳಗಿನವುಗಳಲ್ಲಿ ಐದನ್ನು ಬಿಡಿಸಿ ಬರೆಯಿರಿ.** **(5 x 1= 5 ಅಂಕಗಳು)**

| | |
|---|---|
| **23.** ಏಳೇಳು<br><br>**ಅಥವಾ**<br><br>**23.** ಕಂಬನಿ | |
| **24.** ಮಹರ್ಷಿ<br><br>**ಅಥವಾ**<br><br>**24.** ಚಂದ್ರೋದಯ | |
| **25.** ಅತ್ಯಂತ<br><br>**ಅಥವಾ**<br><br>**25.** ವಿದ್ಯುಚ್ಛಕ್ತಿ | |
| **26.** ನೂರಾರು<br><br>**ಅಥವಾ**<br><br>**26.** ಲೋಕೈಕವೀರ | |
| **27.** ಸದ್ಭಾವನೆ<br><br>**ಅಥವಾ**<br><br>**27.** ಮುರಾರಿ | |

**ಈ ಕೆಳಗಿನವುಗಳಲ್ಲಿ ಐದಕ್ಕೆ ಅರ್ಥ ತಿಳಿಸಿ.** **(5 x 1= 5 ಅಂಕಗಳು)**

| | |
|---|---|
| **28.** ನಿದಾನ<br><br>**ಅಥವಾ**<br><br>**28.** ಸರ್ವಜ್ಞ | |
| **29.** ಅಕ್ಕರೆ<br><br>**ಅಥವಾ**<br><br>**29.** ನಭ | |
| **30.** ಅನಲ<br><br>**ಅಥವಾ**<br><br>**30.** ಧರಣಿ | |
| **31.** ಸುರ<br><br>**ಅಥವಾ**<br><br>**31.** ಮಂದೆ | |
| **32.** ಕುಟಿಲ<br><br>**ಅಥವಾ**<br><br>**32.** ಶರಧಿ | |

ಈ ಕೆಳಗಿನವುಗಳಲ್ಲಿ ಐದಕ್ಕೆ ವಿರುದ್ಧಾರ್ಥಕ ಪದ ಬರೆಯಿರಿ. (5 x 1= 5 ಅಂಕಗಳು)

| |
|---|
| **33.** ನಿಶ್ಚಲ<br><br>**ಅಥವಾ**<br><br>**33.** ಕಳಂಕ |
| **34.** ಕಠಿಣ<br><br>**ಅಥವಾ**<br><br>**34.** ಚಿಂತೆ |
| **35.** ಜಡ<br><br>**ಅಥವಾ**<br><br>**35.** ತೇಲು |
| **36.** ಉಪಕಾರ<br><br>**ಅಥವಾ**<br><br>**36.** ಕೀರ್ತಿ |
| **37.** ಪರೋಕ್ಷ<br><br>**ಅಥವಾ**<br><br>**37.** ಮೂರ್ತ |

ಚಿತ್ತು ಬರಹಕ್ಕಾಗಿ ಸ್ಥಳ

**Space for Rough Work**

ಚಿತ್ತು ಬರಹಕ್ಕಾಗಿ ಸ್ಥಳ

**Space for Rough Work**